ಇನ್ನಷ್ಟು ಮುಂದರಿದ ಮೇಲೆ ನದಿಯ ದಂಡೆಗೆ ಆತುಕೊಂಡಂತೆ ಕಾಡು ಮಾವಿನಮರದ ತೋಪು ಕಣ್ಣಿಗೆ ಬಿತ್ತು. ಸಂಜೆಗೆಂಪು ಬಣ್ಣಕ್ಕಿದ್ದ ಒಂದೆರಡು ಹಣ್ಣುಗಳನ್ನು ಕಿತ್ತು ತಿಂದೆ. ಅದರ ರುಚಿ ನಾಲಿಗೆಗೆ ಸಿಹಿ–ಹುಳಿಯ ಸಿಂಚನ ನೀಡಿ ಇನ್ನಷ್ಟು ತಿನ್ನಬೇಕೆನಿಸಿತು. ದೋರೆಕಾಯಿ, ಹಸುರು ಬಣ್ಣದ ಕಾಯಿಯನ್ನು ತಿನ್ನುವಂತೆ ನಾಲಿಗೆ ಮೊಗ್ಗುಗಳು ಬಯಸಿದವು. ಇದು ಯಾರದ್ದಾದರೂ ತೋಟವಾಗಿದ್ದರೆ, ಅದನ್ನು ನಾನು ಕದ್ದು ತಿನ್ನುತ್ತಿದ್ದೇನೆಂದು ಆತನೇನಾದರೂ ಜಗಳಕ್ಕೆ ಬಂದರೆ ಏನು ಹೇಳುವುದು ಎಂದು ಒಂದು ಕ್ಷಣ ಹಿಂಜರಿದೆನಾದರೂ, ನೆಲದಲ್ಲಿ ಬಿದ್ದಿದ್ದ ಅಪಾರ ಸಂಖ್ಯೆಯ ಹಣ್ಣುಗಳನ್ನು ನೋಡಿ ಬಹುಶಃ ಇದು ಕಾಡಿನ ಮರವೇ ಇರಬೇಕೆಂದು ಭಾವಿಸಿ ಧಾವಿಸಿದೆ. ಎರಡು, ನಾಲ್ಕು, ಎಂಟು... ಹೊಟ್ಟೆ ತುಂಬುತ್ತಲೇ ಇಲ್ಲ. ಬೆಳಗ್ಗಿನಿಂದ ಹಸಿದುಕೊಂಡಿದ್ದೂ ಸೇರಿ ಸಾಮಾನ್ಯವಾಗಿ ತಿನ್ನುತ್ತಿದ್ದುದಕ್ಕಿಂತ ಮೂರು ನಾಲ್ಕು ಪಟ್ಟು ತಿಂದರೂ ಹಸಿವೇ ಹಿಂಗುತ್ತಿಲ್ಲ. ತಿಂದೇ ತಿಂದೇ ತಿಂದೇ... ನನಗರಿವಿರದೇ ಹತ್ತಾರು ಹಣ್ಣುಗಳನ್ನೇ ತಿಂದಿರಬಹುದು. ಆಗ ಹೊಟ್ಟೆ ಒಂದು ಹದಕ್ಕೆ ಬಂತು. ಪೂರ್ತಿ ತುಂಬಿತು ಎನ್ನಿಸುವ ಮೊದಲೇ, ನಾನು ಕಾಡಿಗೆ ಬಂದದ್ದು ಹೀಗೆ ಸ್ವೇಚ್ಛೆಯಾಗಿ ತಿಂದುಕೊಂಡು ಇರುವುದಕ್ಕಾ ಎಂಬ ಪಾಪಪ್ರಜ್ಞೆ ಕಾಡಲಾರಂಭಿಸಿತು. ಅದೇ ನದಿಯ ನೀರಲ್ಲಿ ಇಳಿದು ಕೈ–ಬಾಯಿಗೆಲ್ಲ ಅಂಟಿಕೊಂಡಿದ್ದ ಹಸಿ ಕೊಸರನ್ನೆಲ್ಲ ತೊಳೆದು ಎರಡು ಬೊಗಸೆ ನೀರು ಕುಡಿದು ಅದೇ ಮಾವಿನ ಮರದ ಬುಡಕ್ಕೆ ಒರಗಿದೆ.

ಕುದುರೆ ಸವಾರಿಯ ಪಯಣ, ಬೆಳಗ್ಗಿನಿಂದಲೂ ನಡೆದ ಸುಸ್ತು ಎಲ್ಲಾ ಸೇರಿ ಆಕಳಿಕೆಗಳು ಆಗಮಿಸಿ ಹಾಗೇ ಮಂಪರಿಗೆ ದೂಡಿ ಅದ್ಯಾವ ಗಳಿಗೆಯಲ್ಲಿ ನಿದ್ದೆಗೆ ಸೆಳೆದುಕೊಂಡಿತೋ ಗೊತ್ತೇ ಆಗಲಿಲ್ಲ. ಕಣ್ಣು ಬಿಟ್ಟರೆ ಆಗಲೇ ಸೂರ್ಯ ಮೇಲೇಳುತ್ತಿದ್ದಾನೆ. ಅರೆ, ಇಂಥ ಒಂದು ಸೂರ್ಯೋದಯವನ್ನು ನನ್ನ ಜೀವನದಲ್ಲಿ ಕಂಡೇ ಇರಲಿಲ್ಲವಲ್ಲ ಎಂಬ ಹಳಹಳಿಕೆ ಶುರುವಾಯಿತು. ಸುಖದ ಲೋಲುಪ್ತತೆಯಲ್ಲಿ ನಾನು ಏಳುತ್ತಿದ್ದುದೇ ಸೂರ್ಯ ಹುಟ್ಟಿ ಎಷ್ಟೋ ಗಳಿಗೆಯಾದ ಮೇಲೆ. ನಾಳೆ ಬೆಳಗ್ಗೆ ಇನ್ನೂ ಬೇಗ ಎದ್ದು ಎತ್ತರದ ಪ್ರದೇಶದಲ್ಲಿ ನಿಂತು ಸೂರ್ಯ ನೆಲದಾಳದಿಂದ ಹೇಗೆ ಉದಿಸಿ ಬರುತ್ತಾನೋ ನೋಡಬೇಕೆಂಬ ಆಸೆಯಾಯಿತು. ಇಷ್ಟರಲ್ಲಿ ಚಂದಕ ಊರು ತಲುಪಿರಬೇಕು. ಇಬ್ಬರೂ ಇರದುದ ಕಂಡು ಎಲ್ಲೋ ಹೋಗಿರುತ್ತಾರೆ ಎಂದುಕೊಂಡಿದ್ದ ಮನೆಯವರಿಗೆಲ್ಲ ಆತ ವಿಷಯ ತಿಳಿಸಿರಬೇಕು. ಇನ್ನು ಮನೆಗೆ ಬರಲಾರೆ ಎಂದು ತಿಳಿದುಕೊಂಡ ಮನೆಯವರ ಪ್ರತಿಕ್ರಿಯೆ ಏನಿರಬಹುದು? ಅಪ್ಪ–ಅಮ್ಮನ ಆಕ್ರಂದನ, ಹೆಂಡತಿಯ ರೋದನ, ಇವರೆಲ್ಲರ ವರ್ತನೆ ಕಂಡು ಏನೋ ಆಗಬಾರದ್ದು ಆಗಿದೆ ಎಂದು ದಿಕ್ಕುಗಾಣದೆ ತಾನೂ ಅಳುತ್ತಿರುವ ರಾಹುಲ, ಕರುಳ ಸಂಬಂಧವೇ ಕಡಿದುಹೋದಂತೆ ಕಣ್ಣೀರಾಗುತ್ತಿರುವ ಸೇವಕರು, ಸಂಬಂಧಿಕರು, ಹೇಡಿಯಂತೆ ಊರುಬಿಟ್ಟ ಎಂದು ಒಳಗೊಳಗೇ ಖುಷಿಪಡುತ್ತಿರುವ ಸಂಘದವರು... ಇವರಾರೂ ನನ್ನನ್ನು ಹುಡುಕಿ ಬರಬಾರದಷ್ಟು ದೂರ ನಡೆದುಬಿಡಬೇಕು ಎಂದು ಮನ ಬಂದತ್ತ ನಡೆದೆ. ನಡೆಯುತ್ತ ನಡೆಯುತ್ತ ನಡಿಗೆಯಲ್ಲೂ ಏಕಾಂತವನ್ನು ಗ್ರಹಿಸಿದೆ. ಏಕಾಂತದಿಂದ ಅಂತರಂಗವನ್ನು ಕಾಣಲು ಕೇವಲ ಧ್ಯಾನವನ್ನೇ ಮಾಡಬೇಕೆಂಬಂತೇನೂ ಇಲ್ಲ ಎಂಬ ತಿಳಿವಳಿಕೆ ಮೂಡಿತು.

ಹಗಲು ರಾತ್ರಿ ಎನ್ನದೆ ಯಾರೂ ಕಾಣದ ಗಮ್ಯವನ್ನು ತಲುಪಲು ಸುಮಾರು ಮೂವತ್ತು ಹರದಾರಿಯನ್ನೇ ಸವೆಸಿರಬಹುದು. ಬೆಟ್ಟ ಹತ್ತಿದೆ, ಇಳಿದೆ. ಮತ್ತೆ ಹತ್ತಿದೆ, ಇಳಿದೆ... ಹೀಗೆ ಐದು ಬೆಟ್ಟಗಳನ್ನು ಹತ್ತಿ ಇಳಿದ ನಂತರ ಒಂದು ರಾಜಗೃಹ ಕಣ್ಣಿಗೆ ಬಿತ್ತು. ಅದು ಮಗಧ ನಗರವೆಂದು ತಿಳಿಯಿತು. ಅಷ್ಟರಲ್ಲಿ ನಡೆದೂ ನಡೆದು ಬಳಲಿದ್ದೆ. ಹಸಿವು ನನ್ನನ್ನು ಕಂಗೆಡಿಸಿತ್ತು. ಕಾಡಿನಲ್ಲಿ ನೆಲದ ಮೇಲೆ ಕಾಣುವುದನ್ನು ಮಾತ್ರ ತಿನ್ನಲು ಕಲಿತಿದ್ದ ನನಗೆ ನೆಲದಾಳದಲ್ಲೂ ತಿನ್ನುವ ವಸ್ತುಗಳು ಇರುತ್ತವೆ ಎಂದೇ ತಿಳಿದಿರಲಿಲ್ಲ. ತಿಳಿದಿದ್ದರೆ ಗೆಡ್ಡೆ ಗೆಣಸುಗಳನ್ನಾದರೂ ತಿಂದು ಹೊಟ್ಟೆ ತುಂಬಿಸಿಕೊಳ್ಳಬಹುದಾಗಿತ್ತು. ಬದುಕಲು ಏನಾದರೂ ತಿನ್ನಲೇಬೇಕಲ್ಲ ಎಂದು ಯಾರದಾದರೂ ಮನೆಯಲ್ಲಿ ಭಿಕ್ಷೆ ಸಿಗಬಹುದೇ ಎಂದು ಎಡತಾಕಿದೆ. ಅನ್ನಾಹಾರವೇನೋ ಸಿಕ್ಕಿತು. ಹಸಿದವನಿಗೆ ಆ ಆಹಾರ ಅಮೃತವಾಗಬೇಕಿತ್ತು. ಬಳಲಿದ ನಾಲಿಗೆಗೆ ಅದು ಮೃಷ್ಟಾನ್ನವಾಗಬೇಕಾಗಿತ್ತು. ಆದರೆ ಅದು ಸತ್ವಹೀನವಾಗಿತ್ತು. ರುಚಿ ಎಂಬುದು ಇರಲೇ ಇಲ್ಲ. ಬಹುಶಃ ಅವರು ತಿನ್ನುವ ಆಹಾರದ ಗುಣಮಟ್ಟವೇ ಅದಾಗಿರಬಹುದು ಪಾಪ. ಅವರಾದರೂ ಹೇಗೆ ತಿಂದಾರೋ ತಿಳಿಯೇ. ಆದರೆ ಬದುಕಲು ನಾನಾದರೂ ಏನನ್ನಾದರೂ ತಿನ್ನಲೇಬೇಕಿತ್ತಲ್ಲ... ಅಲ್ಲೇ ಹತ್ತಿರದಲ್ಲಿ ಕಂಡ ಒಂದು ಸಣ್ಣ ಕಲ್ಲಿನ ಮಟ್ಟಿ ನನ್ನನ್ನು ಆಕರ್ಷಿಸಿತು. ಅದು ಏಕಾಂತಕ್ಕೆ ಸೂಕ್ತವಾಗಬಹುದೇನೋ ಅನ್ನಿಸಿ ಏರಿ ಹೋದೆ.

ಹದ್ದಿನ ಆಕಾರದಲ್ಲಿದ್ದರಿಂದ ಅದಕ್ಕೆ ಗೃಧ್ರಕೂಟ ಎಂದು ಹೆಸರಿರಿಸಿರಬಹುದೇನೋ ಅಂದುಕೊಂಡೆ. ಅಲ್ಲಿದ್ದ ಬೃಹದಾಕಾರದ ನೇರಳೆಹಣ್ಣಿನ ಮರದ ಬುಡ ಧ್ಯಾನಕ್ಕೆ ಸೂಕ್ತವಾಗಬಹುದೇನೋ ಅಂದುಕೊಂಡೆ. ಆದರೆ ಕೆಳಗೆ ಹರಡಿದ್ದ ದಟ್ಟನೀಲಿ ಬಣ್ಣದ ದಪ್ಪದಪ್ಪ ಜಂಬುನೇರಲೆ ಹಣ್ಣುಗಳು ನನ್ನನ್ನು ಆಕರ್ಷಿಸಿದವು. ಆರಿಸಿಕೊಂಡು ಬೊಗಸೆ ತುಂಬಾ ತುಂಬಿಕೊಂಡೆ. ಆದರೆ ಮನಸ್ಸಿನಲ್ಲೇನೋ ವಿಹ್ವಲತೆ. ಎಲ್ಲವನ್ನೂ ತ್ಯಜಿಸಿ ಬಂದಿರುವ ನಾನು ಮತ್ತೆ ವ್ಯಾಮೋಹಕ್ಕೆ ಒಳಗಾಗುವುದೇ ಎಂದು ಕೈಯಲ್ಲಿದ್ದ ಹಣ್ಣುಗಳನ್ನೆಲ್ಲ ಬಿಸಾಡಿದೆ. ನಡೆದೂ ನಡೆದು ದಣಿವಾಗಿ, ದೇಹ ವಿಶ್ರಾಂತಿಯನ್ನು ಬಯಸುತ್ತಿತ್ತು. ಅದರ ಬುಡಕ್ಕೆ ಒರಗಿ ಕುಳಿತವನಿಗೆ ಮಂಪರು ಆವರಿಸಿತು. ಹಾಗೆಯೇ ಮಲಗಿ, ಎದ್ದ ಮೇಲೆ ಮತ್ತಷ್ಟು ಹಣ್ಣುಗಳನ್ನು ತಿಂದು ಹಸಿವು ನೀಗಿಸಿಕೊಳ್ಳಬೇಕೆಂದೆನಿಸಿದರೂ, ಎದ್ದ ಮೇಲೆ ಆ ಹಣ್ಣುಗಳನ್ನು ತಿನ್ನಲೇಕೂಡದೆಂದು ನನಗೆ ನಾನೇ ನಿರ್ಬಂಧವನ್ನು ಹೇರಿಕೊಂಡು ನಿದ್ದೆಗೆ ಜಾರಿದೆ. ಚಂದಕ ಊರು ಸೇರಿ ನನ್ನನ್ನು ಬಿಟ್ಟು ಬಂದ ಜಾಗವನ್ನು ಹೇಳಿ, ಅವರೆಲ್ಲ ನನ್ನನ್ನು ವಾಪಾಸು ಕರೆದೊಯ್ಯಲು ಸೈನ್ಯದೋಪಾದಿಯಲ್ಲಿ ಬಂದಂತೆ ಕನಸಾಗಿ ಧಡಕ್ಕನೆ ಎದ್ದೆ. ಇನ್ನೂ ಅಲ್ಲಿರುವುದು ಅಪಾಯವೆಂದರಿತು ಮುನ್ನಡೆದೆ.

ನಾನು ಎಲ್ಲಿಗೆ ಹೋಗುತ್ತಿದ್ದೇನೆ, ಯಾಕೆ ಹೋಗುತ್ತಿದ್ದೇನೆ ಎಂಬ ಯಾವ ಸ್ಪಷ್ಟತೆಯೂ ಇಲ್ಲ. ಆದರೂ ಮುಂದೆ ಮುಂದೆ ಹೋಗುತ್ತಿದ್ದೇನೆ.

## ಕಳೆದ ಸಂಚಿಕೆಯಲ್ಲಿ



ಅರಮನೆಯ ಸುಖ ಭೋಗಗಳ ವರ್ತುಲದಲ್ಲಿ ನಿಜಲೋಕವನ್ನು ಅರಿಯದ ಗೌತಮ, ಬಯಲಿನಲ್ಲಿನ ವೃದ್ಧಾಪ್ಯ, ರೋಗ ಹಾಗೂ ಸಾವುಗಳನ್ನು ಕಂಡು ಕಂಗೆಟ್ಟ. ಮನುಷ್ಯನನ್ನು ಆವರಿಸಿರುವ ದುಃಖಸಾಗರ ಅವನನ್ನು ಬಾಧಿಸತೊಡಗಿತು. ಅದೇ ಸಮಯಕ್ಕೆ, ರೋಹಿಣಿ ನದಿಯ ನೀರಿನ ವಿವಾದ ಮತ್ತೆ ಭುಗಿಲೆದ್ದಿತು. ಕೋಲಿಯರ ಮೇಲೆ ಯುದ್ಧ ಮಾಡುವ ಮೂಲಕ ಹೆಚ್ಚಿನ ನೀರನ್ನು ಪಡೆಯಬೇಕೆಂದು ದೇವದತ್ತ ಹಾಗೂ ಸೇನಾಪತಿ ವಾದಿಸತೊಡಗಿದರು. ಅವರ ಪಿತೂರಿಯ ಮುಂದೆ ಶುದ್ಧೋದನ ಅಸಹಾಯಕನಾಗಿದ್ದ. ಯುದ್ಧದ ಪ್ರಶ್ನೆ ಸಂಘದ ಮುಂದೆ ಬಂದಾಗ, ಸಂಘವೂ ಯುದ್ಧದ ಬಗ್ಗೆ ಒಲವು ವ್ಯಕ್ತಪಡಿಸಿತು. ಆಗ ಮುಂದೆ ಬಂದ ಗೌತಮ, ಯುದ್ಧದ ನಿರರ್ಥಕತೆಯನ್ನು ಸಂಘಕ್ಕೆ ಮನವರಿಕೆ ಮಾಡಿಸಿದ. ಸಂಭಾವ್ಯ ಯುದ್ಧವೊಂದು ತಪ್ಪಿಹೋದದ್ದಕ್ಕಾಗಿ ದೇವದತ್ತ ಹಾಗೂ ಸೇನಾಪತಿ ನಿರಾಶೆಗೊಂಡರು. ರಕ್ತಪಾತವನ್ನು ನಿಲ್ಲಿಸಿದರೂ ಗೌತಮನ ಮನಸ್ಸಿನೊಳಗೇ ಯುದ್ಧ ನಡೆಯುತ್ತಿತ್ತು. ಮನಸ್ಸಿನ ಮಾತಿಗೆ ಓಗೊಟ್ಟ ಗೌತಮ ಇರುಳಿನಲ್ಲಿ ಅರಮನೆಯಿಂದ ಹೊರಬೀಳಲು ನಿರ್ಧರಿಸಿದ. ತನ್ನ ಜ್ಞಾನೋದಯದ ಹಾದಿಗೆ ಅಡ್ಡ ಬರಬಹುದಾದ ಕುಟುಂಬದವರನ್ನೆಲ್ಲ ಸಿದ್ಧಾರ್ಥ ಒಪ್ಪಿಸಿದ. ಎಲ್ಲರೂ ಅಸಹಾಯಕತೆಯಿಂದ ಮೌನವಾದರು.